ಹೋಗಲಾರದ ಉಭಯ ಸಂಕಟದಲ್ಲಿ ಸಿಲುಕಿದೆನಲ್ಲ ಎಂದು ಯೋಚನೆಯಾಯಿತು. ಉಂಡ ಮನೆ ಮುರಿದು ಬೀಳುತ್ತಿರುವಾಗ ನೋಡುತ್ತ ಸುಮ್ಮನೆ ನಿಲ್ಲಲಾದೀತೆ? ಯಾರಿಗೆ ಯಾರ ಮಾತು ಹೇಳುವುದು? ಈ ಮಳೆ, ಗೋಳನ್ನು ಹೊರಗಿಟ್ಟು ಅಮಲಿನ ಸ್ವರ್ಗ ಹಾಸಿ ಮಲಗಿದ ದತ್ತುಗೆ ಎಚ್ಚರ ಬಂದಿಲ್ಲ.

"ಹಬ್ಬಕ್ಕೆ ಒಂದು ಹೊಸ ಅಂಗಿ ಸೈತ ಹಾಕಳದೆ ಮಾಸ್ತರು ಹೋಗಿ ಬಿಟ್ರು, ಪಾಪ; ಸಲೀಲಮ್ಮಂಗೆ ಇಂಥ ಕಷ್ಟ ಬರಬಾರ್ದಾಗಿತ್ತು, ಪಾಪ; ದತ್ತು ಎಂತ ಒಳ್ಳೆ ಪೋರಾಗಿದ್ದ, ಪಾಪ..." ಪುಂಡಲೀಕನ ದೇಶಾವರಿ ಪಾಪದ ಪ್ರವರಕ್ಕೆ ಸಿಡಿಲು ಛಕ್ಕೆಂದು ಬಡಿಯಿತು.

ಮಾಯಾವಿ ಮಳೆ ಹೊಳುವಾಯಿತು; ಆಕಾಶ ಇನ್ನಷ್ಟು ಶುಭ್ರ ನಿರಭ್ರವಾಗಿ ಚೇತೋಹಾರಿಯಾಯಿತು; ಪುಂಡಲೀಕನ ಅಂಗಡಿಯ ತಟ್ಟಿಗೆ ಓರೆಯಾಗಿಟ್ಟ ದತ್ತುನ ಸೈಕಲ್ ತೊಟ್ಟಿಕ್ಕುತ್ತಿತ್ತು; ಸಲೀಲತ್ತೆಯ ಮನೆಯತ್ತ ಹೆಜ್ಜೆ ಹಾಕಿದ; ಸಣ್ಣ ಕುಳಿಗಳಲ್ಲಿ ನಿಂತ ನೀರು ಕನ್ನಡಿ ಹರಳಾಗಿ ರಸ್ತೆಯುದ್ದಕ್ಕೆ ತಂಪು ಉಲ್ಲಾಸ ಚೆಲ್ಲಿತ್ತು.

ಸಲೀಲತ್ತೆಯ ಮನೆಯ ಬಾಗಿಲು ನಿಶ್ಶಬ್ದ ತೆರೆದುಕೊಂಡಿದೆ; ಅಂಗಳದಲ್ಲಿ ಕಸ–ಕಡ್ಡಿ ಚೆಲ್ಲಾಪಿಲ್ಲಿಯಾಗಿದ್ದವು; ಬಾಳೆ ಮರವೊಂದು ಬಾವಿಕಟ್ಟೆಗೆ ಬೇರು ಕಿತ್ತು ವಾಲಿತ್ತು; ಅನಂತ ನೆರಳಷ್ಟೆ ಹಗುರಾಗಿ ಜಗಲಿಯ ಮೂಲೆಯ ಬಾಂಕಿನ ಮೇಲೆ ಕುಳಿತ; ಪಕ್ಕದಲ್ಲಿ ಸದಾ ಮಾಸ್ತರು ಮಾತ್ರ ಕೂತು ಕೂತು ನುಣುಪಾದ ಮಂಪರಿನಲ್ಲಿ ತೂಕಡಿಸುತ್ತಿರುವ, ತುಕ್ಕು ಹಿಡಿದ ನೆನಪಿನ ಸಾಗವಾನಿ ಕುರ್ಚಿಯಿದೆ; ಸಲೀಲತ್ತೆ ನಡು ಮನೆಯೊಳಗೆ ಸೋರಿದ ಮಳೆ ನೀರನ್ನು ಜಗಲಿಯತ್ತ ಬೆನ್ನು ಹಾಕಿ ಮೊಗೆ ಮೊಗೆದು ಬೋಗಣಿಯಲ್ಲಿ ತುಂಬುತ್ತಿದ್ದಳು; ಗೋಡೆ ಮೇಲೆ ನಕಾಶೆಯ ಗೆರೆ ನದಿಯಂತೆ ಕೋಳಿಂದ ನೀರು ಹರಿದಿತ್ತು; ಒಡೆದ ಹಂಚಿನ ಮಾಡಿಂದ ಇನ್ನೂ ತೊಟ್ಟಿಕ್ಕುತ್ತಿತ್ತು; ಸಲೀಲತ್ತೆ ಪ್ರಾಚೀನ ಅವಶೇಷದಡಿಯಲ್ಲಿ ಸಿಲುಕಿದ ಸಂತ್ರಸ್ತೆಯಂತೆ ಬಸವಳಿದು ಹೋಗಿದ್ದಳು; ಮನೆತನವೊಂದರ ಅವಸಾನದ ಕೊನೆಯ ಚಿತ್ರವಾಗಿ ಕಂಡಳು; ಅಕ್ಕುನ ಸಂದೇಶ ನಿರರ್ಥಕವಾಗುವ ಸೂಚನೆ, ಸಂದೇಹ ಅನಂತನಲ್ಲಿ ಗಾಢವಾಗುತ್ತ ಹೋದವು; ಕುಂಟುತ್ತ ಬಂದು ಬಾಗಿಲು ಮುಚ್ಚಿ ಮಿಡ ಹಾಕಿದಳು; ಅವಳ ಕನ್ನಡಕವಿಲ್ಲದ ಮಂಜುಗಣ್ಣಿಗೆ ಅನಂತ ಕಾಣಲಿಲ್ಲ; ಬಚ್ಚಲ ಕಲ್ಲಲ್ಲಿ ನೀರು ಸುರಿಯುವ ಸದ್ದು; ಸಲೀಲತ್ತೆ ಮೀಯುತ್ತಿದ್ದಾಳೆ; ಹೆಜ್ಜೆ ಸಪ್ಪಳವಾಯಿತು; ತನ್ನ ಹಾಜರಾತಿ ಗುರುತಿಸಲಿ ಎಂದು ಎದ್ದು ನಿಂತ; ಪಂಜಿ ತುಂಡು ವಸ್ತ್ರದಲ್ಲಿ ಬೆನ್ನು ಒರೆಸುತ್ತ ಹೊಸ್ತಿಲ ಬಲಕ್ಕೆ ತಿರುಗಿದಳು; ಪೂರ್ಣ ಬೆತ್ತಲು! ಗೋಡೆಗೆ ತೂಗಿದ ಪಟದ ದೇವರ ಪೂಜೆ ಮಾಡುತ್ತಿದ್ದಾಳೆ; ಗಂಧ ತೇಯುವ, ಗಂಟೆ ತೂಗಿದ ಸದ್ದಿನಿಂದಲೆ ಅನಂತ ಊಹಿಸಿದ. ಹಾಗೆಯೇ ದುಂಡಗೆ ಬಂದು ಹೊಸ್ತಿಲಿಗೆ ಊದುಬತ್ತಿ ಸುಳಿದು ಅಡಿಗೆ ಮನೆಯಲ್ಲಿ ಊಟಕ್ಕೆ ಕೂತಳು; ಅಪ್ಪೆಹುಳಿ ಸುರಿದ, ತುತ್ತನ್ನು ಗುಳಕ್ಕೆಂದು ನುಂಗಿದ್ದು ಕೇಳಿತು; ಅವಳಿಗೆ ಮತಿಭ್ರಮಣೆಯೇ? ಶಿಶುವಿನಂತಾಗಿಬಿಟ್ಟಳೆ? ಇರಲಿಕ್ಕಿಲ್ಲ; ಮಾಸ್ತರು ತೀರಿದ ನಂತರ ಕಠೋರ ಶಾಸ್ತ್ರ ಪಾಲನೆ ಮಾಡುತ್ತಿದ್ದಾಳೆ; ನಿತ್ಯ ತೊಳೆದ ಮಡಿ ಸೀರೆ ಉಟ್ಟೇ ಪೂಜೆ, ಊಟವಾಗಬೇಕು; ಆದರೆ ಹೀಗೆ ಸ್ವಚ್ಛಂದ ಬೆತ್ತಲ ಓಡಾಟವೇಕೆ? ಅನಂತನಿಗೆ ವಿಚಿತ್ರವೆನಿಸಿತು; ಈ ಅನಾಯಾಸ ಬೆತ್ತಲ ದರ್ಶನ ತನಗಾಗಿದೆ ಎಂದು ಅವಳಿಗೆ ತಿಳಿಯಬಾರದೆಂದು ಅನಂತ ಬಾಗಿಲು ತೆರೆದು ಕಳ್ಳನಂತೆ ಹೊರಗೆ ಓಡುವ ಅವಕಾಶಕ್ಕಾಗಿ ಕಾತರಿಸಿದ; ಸೀರೆ ಉಟ್ಟು ಬಾಗಿಲತ್ತ ನಡೆಯುತ್ತಿದ್ದವಳು ಕಸಿವಿಸಿಯ ಮುದ್ದೆಯಾಗಿ ಕುಳಿತ ಅನಂತನನ್ನು ಗಮನಿಸಿದಳು; "ನಾನು ದುಂಡಗೆ ಹೋದದ್ದು ಕಂಡ್ಯಾ? ನೀನು ನನಗೆ ಮಗ ಇದ್ದಾಂಗೆ; ನನಕಿಂತ ನಿನಗೇ ಹೆಚ್ಚು ನಾಚಿಕೆಯಲ್ಲೊ; ಉಣ್ಣು ಬಾ ಬಡಸ್ತೆ" ಅತ್ಯಂತ ಸಹಜ ಮಾತಾಡಿದಳು ಅವತರಿಸಿದ ಸಾಕ್ಷಾತ್ ಅನುಸೂಯ; ಹಸಿವಾದರೂ ಅನಂತನಿಗೆ ಉಣ್ಣಲು ಮನಸಾಗಲಿಲ್ಲ; ಮಾತೇ ಹೊರಡದು. ಅನಂತ